



ವಿರಾಟಪುರದ ವಿರಾಗಿ ಸಿನಿಮಾದ ಒಂದು ದೃಶ್ಯ

ವಾದ್ಯಕಾರರನ್ನು ನೇರವಾಗಿ ಕರೆಸಿ, ಧ್ವನಿಮುದ್ರಿಸಿಕೊಂಡಿರುವುದು ಸಹಜತೆಯನ್ನು ಹೆಚ್ಚಿಸಿದೆ. ಹಿಂದೂಸ್ತಾನಿ ಗಾಯಕರ ಕಾಡುವ ಹಾಡಿಗೆ ಸಿಗುತ್ತಿರುವ ಜನಮೆಚ್ಚುಗೆ ಕಂಡು ಮಣಿಕಾಂತ್ ಕೂಡ ಅಚ್ಚರಿಗೊಂಡಿದ್ದಾರೆ. ಇದು ಅನಿರೀಕ್ಷಿತ ಎನ್ನುವ ಅವರಿಗೆ, ಗುರುಗಳ ಸಾಧನೆಗೆ ಸಂದ ಫಲವಿದು ಎಂಬ ನಮ್ರತೆಯೂ ಇದೆ.

ಸಿನಿಮಾ ಸಂಗೀತದಿಂದ ಮಣಿಕಾಂತ್ ದೂರವೇನೂ ಉಳಿದವರಲ್ಲ. 'ಸವಾರಿ' ಸರಣಿ ಚಿತ್ರಗಳ ಕಾಡುವ ಗೀತೆಗಳಾಗಲೀ, ಪುನೀತ್ ಅಭಿನಯದ 'ಪೃಥ್ವಿ' ಸಿನಿಮಾದ ಸಹಜ ಸಂಗೀತವಾಗಲೀ ಜನಮಾನಸದಲ್ಲಿ ಉಳಿದಿದೆ. ಅಷ್ಟೇ ಅಲ್ಲ, 'ಶಾಂಕುತಳೆ ಸಿಕ್ಕಳು' ಎಂಬ ಸಂಚಿತ್ ಹೆಗಡೆ ಕಂಠದ ಹಾಡನ್ನು ಗುನುಗುನಿಸುವ ಜನರೂ ಇದ್ದಾರೆ. ಇವನ್ನೆಲ್ಲ ಸಂಯೋಜನೆ ಮಾಡಿರುವವರು ಮಣಿಕಾಂತ್ ಎನ್ನುವುದು ಎಷ್ಟೋ ಜನರಿಗೆ ಗೊತ್ತಿಲ್ಲ. 'ನನ್ನ ಹಾಡುಗಳು ಉಳಿದಿವೆ. ಅದನ್ನು ನಾನೇ ಸಂಯೋಜಿಸಿದ್ದು ಎನ್ನುವುದು ಪ್ರಚಾರದ ಕಾರಣದಿಂದಲೋ ಏನೋ ಎಷ್ಟೋ ಜನರಿಗೆ ತಿಳಿದಿಲ್ಲ' ಎನ್ನುತ್ತಾರೆ ಈ ಅಪರೂಪದ ಸಂಯೋಜಕ.

ತಂದೆಯ ಹೆಸರಿನಲ್ಲಿ ಟ್ರಸ್ಟ್ ಕಟ್ಟಿರುವ ಮಣಿಕಾಂತ್, ಮಂಗಳೂರನ್ನು ಶಾಸ್ತ್ರೀಯ ಸಂಗೀತದ ತಾಣವನ್ನಾಗಿಸುವ ಪ್ರಯತ್ನದಲ್ಲಿದ್ದಾರೆ. ಕರ್ನಾಟಕದ ಹಲವು ಬಗೆಯ ಲಲಿತಕಲೆಗಳನ್ನು ದೃಶ್ಯವತ್ತಾಗಿ ದಾಖಲು ಮಾಡುವ ದೊಡ್ಡ ಯೋಜನೆಯನ್ನೂ ಹಾಕಿಕೊಂಡಿದ್ದಾರೆ. ವರ್ಷವಿಡೀ ಹಲವು ಸ್ಪರ್ಧೆಗಳನ್ನು ನಡೆಸಿ, ಅದರಲ್ಲಿ ದೈಹಿಕ ಅಸಾಮರ್ಥ್ಯ ಇರುವವರಿಗೂ ಬೆನ್ನುತಟ್ಟುತ್ತಿದ್ದಾರೆ. ತಮಿಳು, ತೆಲುಗು, ಮಲಯಾಳಂ ಸಿನಿಮಾಗಳಿಗೆ ಕೂಡ ಸ್ವರ ಸಂಯೋಜನೆ ಮಾಡಿರುವ ಮಣಿಕಾಂತ್, ಹಿಂದಿ ಚಿತ್ರಗಳಿಗೂ ಕೆಲಸ ಮಾಡಿದ್ದಾರೆ.

'ವಿರಾಟಪುರ ವಿರಾಗಿ' ಸಂಗೀತಮಯ ಸಿನಿಮಾ ಕೂಡ ಹೌದು ಎನ್ನಲು ಹಾಡು ಹುಟ್ಟಿರುವ ಇಂತಹ ಕಥನಗಳೇ ಕನ್ನಡಿ ಹಿಡಿಯುತ್ತವೆ.

ಪ್ರತಿಕ್ರಿಯಿಸಿ: feedback@sudha.co.in